ದಣಿವರಿಯದೆ, ದಣಿವಾರಿಸಿಕೊಳ್ಳದೆ ನಡೆಸುತ್ತಿರುವ ಹೋರಾಟಗಳ ಸಾಕ್ಷ್ಯಚಿತ್ರದಂತೆ ಇದೆ ಈ ಕೃತಿ. ಭಾರತವು ತನ್ನ ಸ್ವಾತಂತ್ರ್ಯದ 'ಅಮೃತ ಮಹೋತ್ಸವ'ವನ್ನು ಆಚರಿಸುತ್ತಿರುವ ಶುಭದಲ್ಲಿ, ಸೂತಕದಂತಹ ಹೆಣ್ಣಿನ ಸ್ಥಿತಿಗತಿಗಳನ್ನು ಅದಕ್ಕೆ ಎದುರಾಗಿ ಇದು ನಿಲ್ಲಿಸುತ್ತದೆ. ಹೆಣ್ಣಿನ ಮಟ್ಟಿಗಂತೂ ಈ ಅಮೃತ ಮಹೋತ್ಸವದಲ್ಲಿ ಸಂಭ್ರಮಕ್ಕೆ ಕಾರಣಗಳೇ ಇಲ್ಲ ಎನ್ನುವುದನ್ನು ಇದು ಪದರ ಪದರಗಳಲ್ಲಿ ಬಿಚ್ಚಿಡುತ್ತಾ ಹೋಗುತ್ತದೆ.

ಬಾಲ್ಯದಲ್ಲಿ ವಾಸ್ತವಕ್ಕೆ-ಹೋರಾಟಕ್ಕೆ ತೆರೆದುಕೊಂಡ ರೂಪಾರ ಬುದ್ಧಿಭಾವಗಳು ಈಗಲೂ ತೆರೆದುಕೊಂಡೇ ಇವೆ ಮತ್ತು ಅವುಗಳನ್ನು ಕುರಿತ ತನ್ನ ಬದ್ಧತೆಯನ್ನೂ ಈ ನಿಡುಗಾಲದಲ್ಲಿ ಉಳಿಸಿಕೊಂಡೇ ಬಂದೇ ಇವೆ. ಈ ವರ್ಷಗಳಲ್ಲಿ ಅವರು ನಡೆಸಿದ ಹೋರಾಟಗಳು ಬಲು ದೊಡ್ಡ ಯಶಸ್ಸನ್ನು ಪಡೆದಿಲ್ಲ, ಆದರೆ ಗೆಲುವನ್ನು ಮೀರಿದ ಅರಿವಿನ ಪಯಣದ ಪಥಿಕರಾಗಿ ರೂಪ ಅವರ ಪ್ರಯಾಣ ಮತ್ತು ಹೋರಾಟಕ್ಕೆ ಐತಿಹಾಸಿಕ ನೆಲೆಯಿದೆ. ಅವರದೇ ಒಂದು ಕವಿತೆಯಲ್ಲಿ, ಮುರಿದ ಕನಸುಗಳನ್ನು ಬೆನ್ನ ಮೇಲೆ ಹೊತ್ತು ಕುದುರೆಯ ಮೇಲೆ ಸಾಗುತ್ತಿರುವ ಹೆಣ್ಣಿನ ಚಿತ್ರವಿದೆ. ಅವಳನ್ನು ಮುನ್ನಡೆಸುತ್ತಿರುವುದು, 'ಇದು ನಾನೇ ಕಟ್ಟಿಕೊಂಡ ದಾರಿ' ಎನ್ನುವ ಆತ್ಮವಿಶ್ವಾಸ.

ಸರ್ಕಾರದ ಹಲವಾರು ಇಲಾಖೆಗಳ ಜೊತೆ, ಎನ್‌ಜಿಒಗಳು ಒಂದು ಕಡೆ, ಅಸಂಖ್ಯಾತವಾದ ಸಂಕಟಗಳಲ್ಲಿ ಸಿಲುಕಿಕೊಂಡ, ಯಾವ ಇಲಾಖೆಯಲ್ಲಿ ಇವರ ಸಮಸ್ಯೆಗೆ ಪರಿಹಾರ ಇರಬಹುದು ಎನ್ನುವುದೇ ತಿಳಿಯದ ಹೆಣ್ಣುಮಕ್ಕಳು ಒಂದು ಕಡೆ. ಈ ಎರಡನ್ನೂ ಸೇರಿಸುತ್ತಾ, ನಿರ್ಜೀವವೂ ಮೃಗೀಯವೂ ಆಗಿರುವ ಸರ್ಕಾರಿ ವ್ಯವಸ್ಥೆಗಳನ್ನು ಜೀವಂತವಾಗಿಸಿ, ಅವುಗಳಲ್ಲಿ ಮನುಷ್ಯ ಸಂವೇದನೆಯನ್ನು ಹುಟ್ಟುಹಾಕುವ ಏಕ ಧ್ಯೇಯದಲ್ಲಿ ಇವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಈ ಕೃತಿಯಲ್ಲಿ ಅವರು ಮಾಡಿದ ಭಾಷಣಗಳಿವೆ, ಪತ್ರಿಕೆಗಳಲ್ಲಿ ಸತತವಾಗಿ ಬರೆದ ಲೇಖನಗಳು, ವಾಚಕರ ವಾಣಿಯ ಪತ್ರಗಳು, ಅಧಿಕಾರಿಗಳು, ರಾಜಕಾರಣಿಗಳಿಗೆ ನೀಡಿದ ಮನವಿ ಪತ್ರಗಳು, ಸಂದರ್ಭಗಳಿಗೆ ಸ್ಪಂದಿಸಿದ ಪ್ರತಿಕ್ರಿಯೆಗಳು, ಸಂದರ್ಶನಗಳು ಎಲ್ಲವೂ ಸೇರಿವೆ. ಒಂದು ದೃಷ್ಟಿಯಿಂದ ಇದು ಅವರ ಆತ್ಮನಿರೂಪಣೆಯೇ ಆಗಿದೆ.

ಹೆಣ್ಣಿನ ಅದಮ್ಯ ಆಶಾವಾದದ ಬಗೆಗೆ ಆರಂಭದಲ್ಲಿ ನಾನೊಂದು ಮಾತು ಹೇಳಿದೆ. ರೂಪ ಅದರ ಶಕ್ತ ಪ್ರತಿನಿಧಿ. ಅವರು ಕಳೆದ ಚುನಾವಣೆಯ ಸಂದರ್ಭದಲ್ಲಿ ನಡೆಸಿದ ಪ್ರಯತ್ನ ಮತ್ತು ಪ್ರಯೋಗ ಇದಕ್ಕೊಂದು ಒಳ್ಳೆಯ ಉದಾಹರಣೆ. ಚುನಾವಣೆಗೆ ನಿಲ್ಲುವ ಅಭ್ಯರ್ಥಿಗಳು 'ಅತ್ಯಾಚಾರ ಮುಕ್ತ ಭಾರತ'ದ ಶಪಥ ಪತ್ರಕ್ಕೆ ಸಹಿ ಹಾಕಬೇಕು ಮತ್ತು ಅದಕ್ಕಾಗಿ ಶ್ರಮಿಸಬೇಕು. ಮೇಲ್ನೋಟಕ್ಕೆ ಇದು ವ್ಯರ್ಥ ಎಂದು ನಮ್ಮಲ್ಲೇ ಅನೇಕರಿಗೆ ಅನ್ನಿಸಬಹುದು. ಆದರೆ, ನಮ್ಮ ಸ್ಥಿತಿ ಹೇಗಿದೆ ಎಂದರೆ, ಯಾವ ಸಣ್ಣ ಪ್ರಯತ್ನಗಳೂ ನಮಗೆ ಅದೆಷ್ಟೇ ಅಲ್ಪ ಪ್ರಮಾಣದಲ್ಲಾದರೂ ಸರಿ- ಸಾವಿರದಲ್ಲಿ ಒಬ್ಬರಿಗಾದರೂ ಸರಿ- ಅದೊಂದು ಅರಿವನ್ನು, ಇಚ್ಛಾಶಕ್ತಿಯನ್ನು ಮೂಡಿಸಿದರೆ ಅದನ್ನು ನಾವು ಗೆಲುವೆಂದೇ ಪರಿಗಣಿಸಬೇಕು. ಇಂಥ ಹನಿಹನಿಗಳೇ ನಾಳೆ ಹಳ್ಳವಾಗಬಹುದೆಂಬ ಆಸೆಯನ್ನು ನಾವು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ.

ಪ್ರತಿರೋಧ, ವಾದ ವಿವಾದ, ಪರಿವರ್ತನಶೀಲತೆಯಲ್ಲಿನ ನಂಬಿಕೆ, ಕಣ್ತೆರೆಸುವ ಬರಹ-ಭಾಷಣ ಎಲ್ಲವನ್ನೂ ರೂಪ ತಮ್ಮ ಹಾದಿಗಳನ್ನಾಗಿ ಮಾಡಿಕೊಂಡಿರುವುದಕ್ಕೆ ಪುಸ್ತಕದುದ್ದಕ್ಕೂ ಉದಾಹರಣೆಗಳಿವೆ. ನಮಗೆ ಆಶ್ಚರ್ಯ ಹುಟ್ಟಿಸುವುದು, ಇಂಥ ದೀರ್ಘ ಕಾಲದ ಹೋರಾಟದಲ್ಲಿ ಇವರು ಕುಗ್ಗಿರಬಹುದು, ಬಸವಳಿದಿರಬಹುದು ಎನ್ನಿಸುವಂಥ ಕೆಲವು ಮಾತುಗಳೂ ಈ ಪುಸ್ತಕದಲ್ಲಿ ಅಲ್ಲಲ್ಲಿ ಕಾಣಿಸುತ್ತವೆ. ಆದರೆ, ಇವರ ನಂಬಿಕೆ ಮಾತ್ರ ಸದಾ ಗಟ್ಟಿಯಾಗಿ ಉಳಿದುಕೊಂಡಿದೆ. ಏನೆಲ್ಲ ಪ್ರಯತ್ನಗಳ ನಂತರವೂ ಮತ್ತೆ 'ಅ'ಕಾರದಿಂದಲೇ ಶುರು ಮಾಡಬೇಕಾದ ಸನ್ನಿವೇಶಗಳನ್ನೂ ಇವರು ಸಂಯಮದಿಂದ, ಆಸ್ಥೆಯಿಂದಲೇ ಶುರು ಮಾಡುತ್ತಾರೆ.

ಜನಗಣತಿ ವರದಿಯೊಂದರಲ್ಲಿ ಎಂದಿನಂತೆ ಗೃಹಿಣಿಯರ ಕೆಲಸವನ್ನು ಅನುತ್ಪಾದಕವೆಂದು ಪರಿಗಣಿಸಿರುವುದನ್ನು ನೋಡಿ ಇವರಿಗೆ ಆಘಾತವೇ ಆಗುತ್ತದೆ. ಹೆಣ್ಣಿನ ಸಬಲೀಕರಣದ ಯೋಜನೆಗಳನ್ನು ತಯಾರು ಮಾಡುವ ಮನಸ್ಸುಗಳೇ ಇಂಥ ವರದಿಯನ್ನೂ ತಯಾರಿಸುತ್ತವೆ ಎಂದರೆ, ಕಾಲ ಬದಲಾಗಿದೆ ಎನ್ನುವುದಕ್ಕೆ ಏನು ಅರ್ಥ? ಗೃಹಿಣಿಯರು ಮಾಡಿದ